ದಿನಾಂಕಃ 23.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಬಿ.ಎ ಪದವಿಧರ. ನಾನು ಓಜುಗುಂಟೆ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಈ ಹಿಂದೆ ದಾವೆಗಳಲ್ಲಿ ಆದಂತಹ ಆದೇಶಗಳನ್ನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. O.S No.216/2004 & R.A 50/2019 ಗಳನ್ನು ಪ್ರಶ್ನಿಸಿ RSA.1699/2010 ರಂತೆ ಗೌರವಾನ್ವಿತ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅಪೀಲು ಈಗಲೂ ಸಹ ಚಾಲ್ತಿಯಲ್ಲಿದೆ ಎಂದರೆ ಸರಿ. ಮೇಲ್ಕಂಡ ದಾವೆಗಳು ದೇವಸ್ಥಾನದ ಯಜಮಾನಿಕೆ ಬಗ್ಗೆ ನಡೆದಿರುತ್ತವೆ ಎಂದರೆ ಸರಿ. Writ.A.6315/2018 ರಂತೆ ಗೌರವಾನ್ವಿತ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿ. ದಿಃ04.03.2025 ರಂದು Writ.A.6315/2018 ಇತ್ಯರ್ಥವಾಗಿದೆ ಎಂದರೆ ಸರಿ. ಸಾಕ್ಷಿಗೆ Writ.A.6315/2018 ರ ಆದೇಶದ ಪ್ರತಿಯನ್ನು ತೋರಿಸಲಾಗಿ ಅವರು ಒಪ್ಪಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ರಂಗನಾಥಸ್ವಾಮಿ ದೇವಸ್ಥಾನದಿಂದ 70 ಅಡಿ ದೂರದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ಇದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಎರಡು ದೇವಸ್ಥಾನಗಳು ಒಂದೇ ಜಾಗದಲ್ಲಿ ಇವೆ ಎಂದು ನುಡಿಯುತ್ತಾರೆ. ಆಂಜನೇಯಸ್ವಾಮಿ ದೇವಸ್ಥಾನದ ಪೂರ್ವ, ಪಶ್ಚಿಮ, ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ದೇವಸ್ಥಾನದ ಹಿಂದೆ ಜಾಗ ಇದ್ದು ನಂತರ ಮನೆಗಳಿರುತ್ತವೆ. ಆಂಜನೇಯಸ್ವಾಮಿ ದೇವಸ್ಥಾನ ಓಜುಗುಂಟ ಗ್ರಾಮದ ಗ್ರಾಮಸ್ಥರಿಗೆ ಸೇರಿದ್ದು ಎಂದರೆ ಸರಿಯಲ್ಲ. ದೇವಸ್ಥಾನ ನಿರ್ಮಿಸುವಾಗ ಊರಿನ ಜನರು ದೇಣಿಗೆ ನೀಡಿದ್ದರು ಎಂದರೆ ಸರಿಯಲ್ಲ. ದೇವಸ್ಥಾನದ ಒಡವೆಗಳನ್ನು ರಂಗನಾಥಸ್ವಾಮಿ ದೇವಸ್ಥಾನದ ಮ್ಯಾನೇಜ್‌ಮೆಂಟ್ ರವರಿಗೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮ್ಯಾನೇಜ್‌ಮೆಂಟ್ ಅನ್ನು ಗೌಡರವರು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸಮೀತಿ ಇದೆ ಎಂದು ನುಡಿದಿರುತ್ತಾರೆ. O.S No.216/2004 & R.A 50/2019 ರ ಆದೇಶಗಳನ್ನು ಈ ದಾವೆಯ 2ನೇ ವಾದಿಯ ಮ್ಯಾನೇಜ್‌ಮೆಂಟ್ ಗೆ ಸಂಬಂಧಪಟ್ಟವರಲ್ಲ ಎಂದು ತೀರ್ಮಾನವಾಗಿದೆ ಎಂದರೆ ಸರಿ. ಆದ್ದರಿಂದ 2ನೇ ವಾದಿಗೆ ಹಕ್ಕನ್ನು ಸೃಷ್ಟಿಸಲು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮಲ್ಲೇಶ್ವರಸ್ವಾಮಿ ಮತ್ತು ರಂಗನಾಥಸ್ವಾಮಿ ದೇವಸ್ಥಾನದ ಗೌಡ ಮತ್ತು ಯಜಮಾನರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.